ಪಿ. ಡಬ್ಲ್ಯೂ : 03

**ಸಾಕ್ಷಿಗೆ ದಿನಾಂಕ 12.02.2018 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಪ್ರತಿವಾದಿ ಪರ ವಿ.ಪಿ ವಕೀಲರಿಂದ ಬಿ.ಎಸ್.ಎ ಪರವಾಗಿ**

ನನಗೆ ವಾದಿ ಸಂಬಂಧಿಕರಲ್ಲ. ನಾನು ಸುಬ್ಬಮ್ಮ ರವರಿಂದ ನಿವೇಶನ ಖರೀದಿಸಿರುವುದರಿಂದ ಪರಿಚಯವಿದ್ದಾರೆ. ಸದರಿ ಸುಬ್ಬಮ್ಮ ನವರು ತಮಗೆ ಸೇರಿದ 90 ಇನ್ ಟು 45 ಅಡಿ ವಿಸ್ತೀರ್ಣದ ಖಾಲಿ ಜಾಗದ ಪೈಕಿ ನನಗೆ 53 ಇನ್ ಟು 45 ಅಡಿ ವಿಸ್ತೀರ್ಣದ ನಿವೇಶನವನ್ನು ಮಾರಾಟ ಮಾಡಿದ್ದಾರೆ. ಅವರು 35 ಇನ್ ಟು 45 ಅಡಿ ಜಾಗ ಉಳಿಸಿಕೊಂಡಿದ್ದಾರೆ. ಸದರಿ ಉಳಿಕೆ ವಿಸ್ತೀರ್ಣದ ಆಸ್ತಿಯ ಪೂ.ಕ್ಕೆ ನಾರಾಯಣಪ್ಪ ರವರ ಮಗ ಶ್ರೀನಿವಾಸ್ ರವರ ಖಾಲಿ ಜಾಗ , ಪ.ಕ್ಕೆ ಮರಿಗೌಡ ರವರ ಮಗ ಮಾದೇವು ರವರ ಮನೆ , ಉ.ಕ್ಕೆ ರಸ್ತೆ , ದ.ಕ್ಕೆ ಸ್ವಾಮಿಗೌಡ ರ ಜಾಗ ಇದೆ. ದಾವಾ ಅನುಸೂಚಿ ಆಸ್ತಿಯಲ್ಲಿ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಖಾಲಿ ಜಾಗ ಇದ್ದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸುಬ್ಬಮ್ಮ ರವರಿಂದ ಯಾವುದೇ ಆಸ್ತಿಯನ್ನು ಖರೀದಿಸಿಲ್ಲದೇ ಇದ್ದರೂ ಸಹಾ ವಾದಿಯ ಮೇಲಿನ ವಿಶ್ವಾಸದಿಂದ ಅವರಿಗೆ ಸಹಾಯ ಮಾಡಲು ನನಗೆ ದಾವೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ